ದಿನಾಂಕ 9-2-2017
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.
**ಮುಖ್ಯ ವಿಚಾರಣೆ ಃ ಶ್ರೀ ಎಸಿಪಿ ವಕೀಲರಿಂದ**

ಕ್ಯಾರಕೊಪ್ಪ ಗ್ರಾಮದ ವಾರಸಾ ಡೈರಿ ನಂಬರ 1318 ಇದನ್ನು ನಿಡಿ 8 ಎಂದು, ದಿನಾಂಕ 10-4-2001ರಂದು ಧಾರವಾಡ ತಹಶೀಲ್ದಾರ ಇವರು ಚಂದ್ರಶೇಖರ ಗುರುಬಸಪ್ಪ ಭಾರತಿ ಇವರಿಗೆ ಬರೆದ ಪತ್ರ ನಿಡಿ 9 ಎಂದು, ಗುರುಬಸಪ್ಪ ವೀರಭದ್ರಪ್ಪ ಭಾರತಿ, ಚಂದ್ರಶೇಖರ ಗುರುಬಸಪ್ಪ ಭಾರತಿ ಇವರ ಹೆಸರಲ್ಲಿರುವ ಖಾತೆ ಉತಾರನ್ನು ನಿಡಿ 10 ಎಂದು, ತೆರಿಗೆ ತುಂಬಿದ ಪಾವತಿಯನ್ನು ನಿಡಿ 11 ಎಂದು ಗುರುತಿಸಲಾಯಿತು.

ಕ್ಯಾರಕೊಪ್ಪ ಗ್ರಾಮದ ಬ್ಲಾಕ ನಂಬರ 190 ಪ್ಲಾಟ ನಂಬರ 21 ಇದರ 1986-87ರ. 2000-2001ರ ಸಾಲಿನ 2 ಪಹಣಿ ಪತ್ರಿಕೆಗಳನ್ನು ನಿಡಿ 12 ಹಾಗು 13 ಎಂದು, ಸಂಗಪ್ಪ ಶಿದ್ಲಿಂಗಪ್ಪ ಪನದಿ ಇವರು ಗುರುಬಸಪ್ಪ ವೀರಭದ್ರಪ್ಪ ಭಾರತಿ ಇವರಿಗೆ ದಿನಾಂಕ 7-5-1973ರಂದು ಕ್ಯಾರಕೊಪ್ಪ ಗ್ರಾಮದ ಜಮೀನು ಸರ್ವೆ ನಂಬರ 101. ಕ್ಷೇತ್ರ 4 ಎಕರೆ 25 ಗುಂಟೆ ಇದರ ಪೈಕಿ ಪ್ಲಾಟ ನಂಬರ 21ನ್ನು 6000/- ರೂಗಳಿಗೆ ಮಾರಾಟ ಮಾಡಿದ ಕುರಿತು ನೋಂದಾಯಿತ ಖರೀದಿ ಪತ್ರ ನಂಬರ 676 ಇದನ್ನು ಹಾಜರುಪಡಿಸಿದ್ದು ಸದರಿ ಖರೀದಿ ಪತ್ರವನ್ನು ನಿಡಿ 14 ಎಂದು ಗುರುತಿಸಲಾಯಿತು. ಖರೀದಿ ಪತ್ರದ ಮೇಲಿರುವ ತನ್ನ ಮಾವ ಗುರುಬಸಪ್ಪ ವೀರಭದ್ರಪ್ಪ ಭಾರತಿ ಇವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಡಿ 14ಎ ಎಂದು ಗುರುತಿಸಲಾಯಿತು. ಡಾಕ್ಟರ್ ಎಸ್ ಜಿ ಭಾರತಿ ಇವರು ಅವರ ವಕೀಲರಾದ ಶ್ರೀ ಎಂ ಶಾಂತನಗೌಡರ ಇವರಿಗೆ 23-10-1991ರಂದು ಬರೆದ ಪತ್ರ ನಿಡಿ 15 ಎಂದು, ವಾದಿ ಶಿವಪ್ಪ ಗುರುಬಸಪ್ಪ ಭಾರತಿ ಇವರು ಅರ್ಬನ್ ಲ್ಯಾಂಡ ಸೆಲ್ಲಿಂಗ ಅತಾರಿಟಿ ಮುಂದೆ 23-5-1977ರಂದು ಕೊಟ್ಟ ಹೇಳಿಕೆಯ ನಕಲು ಪ್ರತಿಯನ್ನು ನಿಡಿ 16 ಎಂದು, ಧಾರವಾಡದ ನಗರದ ನಿವೇಶನ ನಂಬರ 114ರ ಕುರಿತು ತೆರಿಗೆ ರಜಿಸ್ಟರ ಪ್ರತಿಯನ್ನು ನಿಡಿ 17 ಎಂದು ಗುರುತಿಸಲಾಯಿತು.

ಈಗ ದಿನಾಂಕ 22-8-1983ರಂದು ಬರೆದ ಒಂದು ಕಾಗದದ ಮೇಲಿನ ಸಹಿ ಒಂದನ್ನು ಸಾಕ್ಷಿಗೆ ತೋರಿಸಿ ಸದರಿ ಸಹಿ ಯಾರದ್ದು ಅಂತಾ ಹೇಳಬಲ್ಲೀರಾ ಎಂದು ಕೆಳಲಾಗಿ ಸಾಕ್ಷಿಯು ಈ ಸಹಿ ತನ್ನ ಮಾವ ಗುರುಬಸಪ್ಪ ವೀರಭದ್ರಪ್ಪ ಭಾರತಿ ಅವರದ್ದು ಎಂದು ಹೇಳಿರುತ್ತಾರೆ. ಆ ಕಾರಣ ಸದರಿ ಪತ್ರವನ್ನು ನಿಡಿ 18 ಎಂದು ಗುರುತಿಸಲಾಯಿತು. ಕಾರಣ ದಾವಾ ವಜಾ ಮಾಡಲು ಕೋರುತ್ತೇನೆ.

**ಪಾಟೀ ಸವಾಲು ಃ ಶ್ರೀ ಡಿ ಬಿ ಎನ್ ವಕೀಲರಿಂದ**

ಅವರು ಹಾಜರಿದ್ದು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ, ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾದೀಶರು
ಮತ್ತು ಪ್ರದನ್ಯಾದಂ, ಧಾರವಾಡ